**2055 (2504) ಶ್ರೀ ಸಿಂಧೂರ ಜಿ.ರಾಜಶೇಖರ (ಶಿಗ್ಗಾಂವ್) :-** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ - ಸವಣೂರ ತಾಲ್ಲೂಕುಗಳಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿದ್ದು ಸಾರ್ವಜನಿಕರ ಆರೋಗ್ಯದ ಮೇಲೆ ಹೆಚ್ಚಿನ ದುಷ್ಪರಿಣಾಮವಾಗಿ, ತೊಂದರೆಯುಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನಕಲಿ ವೈದ್ಯರ ಮೇಲೆ ಸರಕಾರ ಯೋಗ್ಯ ಕ್ರಮ ಕೈಗೊಂಡು ಸಾರ್ವಜನಿಕರ ಆರೋಗ್ಯ ಕಾಪಾಡಲು ಸರಕಾರ ಯಾವ ಯೋಜನೆಯನ್ನು ಹಾಕಿಕೊಂಡಿದೆ?

**ಶ್ರೀ ಆರ್.ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :**

ಅ) ಬಂದಿದೆ.

ಆ) ಕರ್ನಾಟಕ ಆಯುರ್ವೇದ ಸಿದ್ಧ, ನ್ಯಾಚುರೋಪತಿ, ಯುನಾನಿ ಮತ್ತು ಯೋಗ ಪ್ರಾಕ್ಟೀಷನರ್ಸ್ ರಿಜಿಸ್ಟ್ರೇಷನ್ ಅಂಡ್ ಮೆಡಿಕಲ್ ಪ್ರಾಕ್ಟೀಷನರ್ಸ್ ಮಿಸಲೇನಿಯಸ್ ಪ್ರಾವಿಷನ್ಸ್ ಆಕ್ಟ್ 1961ರ 40(2)ರ ಪ್ರಕಾರ, ರಿಜಿಸ್ಟ್ರಾರ್, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ, ಬೆಂಗಳೂರು ಇವರಿಗೆ ಸರ್ಕಾರದ ಅಧಿಸೂಚನೆ ಸಂ:ಆಕುಕ/409/ಪಿಐಎಂ/2004, ದಿ:1-12-2004 ರಲ್ಲಿ ನಕಲಿ ವೈದ್ಯರ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರ ನೀಡಲಾಗಿದೆ. ರಿಜಿಸ್ಟ್ರಾರ್‌ರವರು ಸದರಿ ತಾಲ್ಲೂಕಿಗಳಿಗೆ ಭೇಟಿ ನೀಡಿ ನಕಲಿ ವೈದ್ಯರ ಮೇಲೆ ನೋಟೀಸ್ ಜಾರಿ ಮಾಡಿ ನಕಲಿ ವೈದ್ಯರಿಂದ ಬರವಣಿಗೆ ಮೂಲಕ ಮುಚ್ಚಳಿಕೆ ಪಡೆದು ಚಿಕಿತ್ಸಾಲಯವನ್ನು ಮುಚ್ಚಿಸಲಾಗಿದೆ.

**2056 (2538) ಶ್ರೀ ಸಿಂಧೂರ ಜಿ.ರಾಜಶೇಖರ (ಶಿಗ್ಗಾಂವ್) :-** ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಹುಬ್ಬಳ್ಳಿ ನಗರದಲ್ಲಿರುವ ಕಿಮ್ಸ್ ಆಸ್ಪತ್ರೆಯಲ್ಲಿ ಹೊರ ರೋಗಿಗಳ ವಿಭಾಗದಿಂದ (OPD) 2003-04, 2004-05, 2005-06, 2006-07ನೇ ಸಾಲಿನಲ್ಲಿ ಸಂಗ್ರಹವಾಗಿರುವ ಹಣ ಎಷ್ಟು (ವಿವರ ಒದಗಿಸುವುದು);

ಆ) ಹೊರ ರೋಗಿಗಳ ವಿಭಾಗದಿಂದ (OPD) ಸಂಗ್ರಹವಾಗಿರುವ ಹಣವನ್ನು ಹೊರ ರೋಗಿಗಳ ವಿಭಾಗಕ್ಕೆ ವೆಚ್ಚ ಮಾಡದೇ ಬೇರೆ ಬೇರೆ ಕಟ್ಟಡಗಳ ಕಾಮಗಾರಿಗೆ,